ಇಂದು ದಿಃ 19/11/2019 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದಃ

3 ಆಸ್ತಿ ಕುರಿತು ಈ ದಾವೆ ಸಲ್ಲಿಸಿದ್ದೇನೆ. ನಾನು ಕೆಂಪುಸಿದ್ದನಹುಂಡಿಯಲ್ಲಿ ವಾಸವಿದ್ದೇನೆ ಹಾಗು ತೊಣಚಿಕೊಪ್ಪಲಿನಲ್ಲೂ ವಾಸವಿದ್ದೇನೆ. ಕೆಂಪುಸಿದ್ದನಹುಂಡಿಯಲ್ಲಿ ನಾನು ಯಾರ ಮನೆಯಲ್ಲಿ ವಾಸವಿರುವುದು ಎಂದು ಕೇಳಿದರೆ ನಾನು ಕೆಂಪುಸಿದ್ದನಹುಂಡಿಯಲ್ಲಿ ವಾಸಮಾಡುವುದಿಲ್ಲ ಆದರೆ ಕೆಂಪುಸಿದ್ದನಹುಂಡಿಗೆ ಬಂದು ಹೋಗಿ ಮಾಡುತ್ತಿರುತ್ತೇನೆ ಎಂದು ನುಡಿಯುತ್ತೇನೆ.

ನನಗೆ ಕನ್ನಡ ಓದಲು ಬರುವುದಿಲ್ಲ. ದಾವಾ ಐಟಂ ನಂ.2 ಅಂದರೆ ಸರ್ವೆ ನಂ.17 ರ ಆರ್ ಟಿ ಸಿ ನಿ ಪಿ 1 ರಲ್ಲಿ ಗೋಪಯ್ಯ ಎಂದು ಹೆಸರಿರುವ ಕುರಿತು ಆತ ಯಾರು ಎಂದು ಕೇಳಿದರೆ ಹೇಳಲು ನನಗೆ ಗೊತ್ತಿಲ್ಲ. ಸರ್ವೆ ನಂ.17 ನನ್ನ ತಂದೆಯಿಂದ ಬಂದಿರುವ ನನ್ನ ಒಟ್ಟುಕುಟುಂಬದ ಆಸ್ತಿ ಎಂದುಹೇಳಿರುವ ಕುರಿತು ಅದನ್ನು ರುಜುವಾತು ಪಡಿಸಲು ಬೇರೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ.

ನಂಜುಂಡೇಗೌಡ ನನ್ನ ತಂದೆ. ಸರ್ವೆ ನಂ.179 ರ ಆರ್ ಟಿ ಸಿ ಯಲ್ಲಿ ಅಂದರೆ ನಿ ಪಿ 5 ರಲ್ಲಿ ನಂಜುಂಡೇಗೌಡರ ಮಕ್ಕಳಾದ ಕೆ. ಸಿದ್ದು , ಚಿಕ್ಕಣ್ಣ ಹಾಗು ಪುಟ್ಟನಂಜ ಉಃ ಮಾದಯ್ಯ ರವರ ಹೆಸರು ಇದೆ ಎಂದರೆ ನಿಜ. ಸದರಿ ಖಾತೆದಾರರಾದ 4 ಮಂದಿ ನನ್ನ ಅಣ್ಣಂದಿರು. ಎಷ್ಟು ವರ್ಷದಿಂದ ಸದರಿ ಖಾತೆ ನನ್ನ ಅಣ್ಣಂದಿರ ಹೆಸರಿನಲ್ಲಿ ಇದೆ ಎಂದು ಹೇಳಲು ಗೊತ್ತಿಲ್ಲ. ನನ್ನ ಮದುವೆಯಾಗಿ 40 ವರ್ಷವಾಯಿತು. ನನ್ನ ಗಂಡನ ಮನೆ ಮೈಸೂರಿನ ತೊಣಚಿಕೊಪ್ಪಲಿನಲ್ಲಿ ಇದೆ. ಮದುವೆಯಾದ ಲಾಗಾಯ್ತು ನಾನು ಮೈಸೂರಿನ ತೊಣಚಿಕೊಪ್ಪಲಿನಲ್ಲಿ ವಾಸವಿರುವುದು ಎಂದರೆ ನಿಜ. ನಾನು ಕೆಂಪುಸಿದ್ದನಹುಂಡಿಗೆ ಬರುವುದು ಜಮೀನುಗಳಲ್ಲಿ ವ್ಯವಸಾಯಮಾಡಲು ಆಗಿದೆ. ಆರೀತಿ ಜಂಟಿಯಾಗಿ ವ್ಯವಸಾಯ

ಮಾಡುತ್ತೇನೆ. ಆರೀತಿ ವ್ಯವಸಾಯಮಾಡಿದ್ದೇನೆ ಎಂದು ತೋರಿಸುವಂತ ಹಣಕಾಸು ಖರ್ಚು ಮುಂತಾದ ಲೆಕ್ಕಪತ್ರಗಳನ್ನು ನಾನು ನಿರ್ವಹಿಸಿಲ್ಲ.

ಸರ್ವೆ ನಂ.179 ರಲ್ಲಿ 5 ಎಕರೆ 21 ಗುಂಟೆ ಇದೆ ಹಾಗು ಅದರಲ್ಲಿ 5 ಗುಂಟೆ ಕರಾಬುಇದೆ. ಸರ್ವೆ ನಂ.17 ರಲ್ಲಿ 1 ಎಕರೆ 33 ಗುಂಟೆ ಇದೆ ಹಾಗು ಅದರಲ್ಲಿ 20 ಗುಂಟೆ ಯನ್ನು ನನಗೆ ವೀಲುನಾಮೆ ಮಾಡಲಾಗಿದೆ. ನನ್ನ ತಾಯಿ ಅದರ ವೀಲುನಾಮೆಯನ್ನು ಮಾಡಿದ್ದಾರೆ. 1991 ರಲ್ಲಿ ಸದರಿ ವೀಲುನಾಮೆಯನ್ನು ಮಾಡಿದ್ದಾರೆ. ಅದರ ಪ್ರಕಾರ ನನ್ನ ಹೆಸರಿಗೆ ಖಾತೆ ಬದಲಾವಣೆ ಆಗಿಲ್ಲ. ಸದರಿ ವೀಲುನಾವೆಯಲ್ಲಿ ಬಂದ ಆಸ್ತಿಗೆ ನಾನು ಕಂದಾಯ ಕಟ್ಟಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಎಲ್ಲವೂ ಒಟ್ಟಿಗೆ ಇದ್ದ ಕಾರಣ ಕಂದಾಯ ಕಟ್ಟಿಲ್ಲ , ಅಷ್ಟು ನನಗೆ ಗೊತ್ತಾಗಲಿಲ್ಲ. ಸದರಿ 20 ಗುಂಟೆ ಜಮೀನಿನ ಯಾವ ಭಾಗದಲ್ಲಿ ಬರುತ್ತೆ ಎಂದು ಅಳತೆ ಮಾಡಿಸಿ ಗಡಿ ಗುರುತಿಸಿದ್ದೇನೆಯೇ ಎಂದು ಕೇಳಿದರೆ ಆರೀತಿ ಮಾಡಿಲ್ಲ, ಎಲ್ಲವೂ ಒಟ್ಟಿಗೆ ಇರುವುದರಿಂದ ಆರೀತಿ ಮಾಡಲಿಲ್ಲ ಎಂದುನುಡಿಯುತ್ತೇನೆ. ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ.

ನನ್ನ ತಾಯಿ ವೀಲುನಾಮೆ ಮಾಡಿಕೊಟ್ಟಿದ್ದಾರೆಂದು ಹೇಳಿರುವ ಕುರಿತು ನನ್ನ ತಾಯಿಗೆ ಅದು ಹೇಗೆ ಬಂತು ಎಂದು ಕೇಳಿದರೆ ನನ್ನ ತಾಯಿಗೆ ಗುತ್ತಿಗೆ ಮೂಲಕ ಬಂತು ಎಂದು ನುಡಿಯುತ್ತೇನೆ. ಆರೀತಿ ತೋರಿಸುವಂತ ದಾಖಲೆಯನ್ನು ಹಾಜರು ಪಡಿಸಿದ್ದೇನೆ.

ನನ್ನ ಅಣ್ಣಂದಿರ ಹೆಸರಿನಲ್ಲಿ ಮಾತ್ರ ಇರುವ ಕಂದಾಯ ದಾಖಲೆಗಳನ್ನು ತಿದ್ದುಪಡಿ ಮಾಡಲು ನಾನು ತಹಸೀಲ್ದಾರ್ ರವರಿಗೆ ಅರ್ಜಿಯನ್ನು ಸಲ್ಲಿಸಿಲ್ಲ. ದಾವೆ ದಾಖಲಿಸುವ ಮೊದಲು ನಿ ಪಿ 7 ರಿಂದ 9 ರಂತೆ ನೋಟೀಸ್ ಅನ್ನು ಯಾಕೆ ನೀಡಿದ್ದು ಎಂದು ಕೇಳಿದರೆ ದುಡ್ಡನ್ನು ಅವರೇ ತೆಗೆದುಕೊಳ್ಳಲು ಪ್ರಯತ್ನ ಪಡುತ್ತಿದ್ದ ಕಾರಣ ಕೊಟ್ಟಿದ್ದೇನೆ ಎಂದು ನುಡಿಯುತ್ತೇನೆ. ಸರ್ವೆ ನಂ.179 ರ ಭೂಸ್ವಾದೀನ ಪರಿಹಾರದ ಹಣವನ್ನು ನನ್ನ ಅಣ್ಣಂದಿರೇ ತೆಗೆದುಕೊಳ್ಳಲು ಪ್ರಯತ್ನ ಪಡುತ್ತಿದ್ದರು. ರೂ.1,16,02,500/ ಹಣವು ಬ್ಯಾಂಕಿನಲ್ಲಿ ಇದೆ.

ನನ್ನ ತಂದೆ ತೀರಿಕೊಂಡು 28 – 29 ವರ್ಷ ವಾಗಿದೆ. ನನ್ನ ತಾಯಿ ತೀರಿಕೊಂಡು ಅಂದಾಜು 26 – 27 ವರ್ಷವಾಯಿತು. ತಂದೆ ಕಾಲವಾದ ಕೂಡಲೆ ನನ್ನ ಸಹೋದರರು

ಬಾಯಿಮಾತಿನ ಮೂಲಕ ಸ್ವತ್ತುಗಳನ್ನು ವಿಭಾಗಮಾಡಿಕೊಂಡು ಪ್ರತ್ಯೇಕ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅದನ್ನು ನಾನು ಪ್ರಶ್ನಿಸದೆ ಇದುವರೆವಿಗೂ ಸುಮ್ಮನಿದ್ದೆ ಎಂದರೆ ಸರಿಯಲ್ಲ. ನನ್ನ ಮದುವೆಯಾದ ಲಾಗಾಯ್ತು ನಾನು ಯಾವುದೇ ಹಿಸ್ಸೆ ಕೇಳಿಲ್ಲ ಹಾಗು ಯಾವುದೇ ಹಣವನ್ನು ನನಗೆ ಆಕಾರಣದಿಂದಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.179 ಒಟ್ಟು ಜಮೀನನ್ನು ನನ್ನ ಅಣ್ಣಂದಿರು ವಿಭಾಗಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ 2 ನೇ ಪ್ರತಿವಾದಿಗೆ ಪೂರ್ವದ ಕಡೆಗೆ ಹಾಗು 4 ನೇ ಪ್ರತಿವಾದಿಯು ಮಧ್ಯಭಾಗದಲ್ಲಿ ಹಾಗು 3 ನೇ ಪ್ರತಿವಾದಿ ಇನ್ನೊಂದು ಭಾಗದಲ್ಲಿ ಹಿಸ್ಸೆ ಸ್ವಾಧಿನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಬಂದ 2 ಎಕರೆ 10 ಗುಂಟೆಯನ್ನು ಮರಪ್ಪ ರವರಿಗೆ ಭೋಗ್ಯಕ್ಕೆ ನೀಡಲಾಗಿತ್ತು ಎಂದರೆ ಸರಿಯಲ್ಲ.

ಸರ್ವೆ ನಂ.17 ನ್ನು ವ್ಯವಸಾಯದ ಅಭಿವೃದ್ಧಿಗಾಗಿ ಸಿದ್ದು ರವರು 12 ಗುಂಟೆ ಜಮೀನನ್ನು ಸರ್ವೆ ನಂ.17 ರಲ್ಲಿ ಕ್ರಯಕ್ಕೆ ನೀಡಿದ್ದಾರೆ ಎಂದರೆ ಸರಿಯಲ್ಲ. 15 ವರ್ಷದ ಹಿಂದೆ ಆರೀತಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಆರೀತಿ ಮಾಡಿರುವುದು ನನಗೆ ಗೊತ್ತಿರಲಿಲ್ಲ ಹಾಗು ಅದು ರದ್ದಾಗಬೇಕು.

ಪ್ರತಿವಾದಿಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.